CAREERINDIA

Total No. of Questions : 61 ]

Total No. of Printed Pages : 4 ]

**Code No. 16**

**June/July, 2010**

# OPTIONAL KANNADA

Time : 3 Hours 15 Minutes ] [ Max. Marks : 100

***ಸೂಚನೆ :*** i) ಪ್ರಶ್ನೆಗಳ ಸಂಖ್ಯೆಗಳನ್ನು ಉತ್ತರ ಪತ್ರಿಕೆಯ ಎಡ ಭಾಗದಲ್ಲಿ ಬರೆಯಿರಿ.

ii) ಪ್ರತಿ ವಿಭಾಗದಲ್ಲಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

## ಭಾಗ – I

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ : 7 × 1 = 7

1) ನಂದನವನದಲ್ಲಿ ಯಾವ ಯಾವ ಹಣ್ಣುಗಳಿದ್ದವು ?

2) ಸಾಮವೇದಿಗಳು ಶಿಷ್ಯರೊಂದಿಗೆ ಅರಣ್ಯಕ್ಕೆ ಬಂದ ಕಾರಣವೇನು ?

3) ಇಂದ್ರನ ಸಾರಥಿಯ ಹೆಸರೇನು ?

4) ಅನ್ನದ ಮಹತ್ವವೇನು ?

5) ಆಸ್ಥಾನದ ಗಾಯಕಿಯರು ಯಾವ ರೀತಿ ಹಾಡಿದರು ?

6) ದಿವಸ ಎಷ್ಟನೇ ದಿನವೆಂದು ನಿಶ್ಚಯವಾಗಿತ್ತು ?

7) ಉಮ್ಮತ್ತೂರಿನ ಪ್ರಭುವಿನ ಹೆಸರೇನು ?

II. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಮೂರಕ್ಕೆ** ಹತ್ತರಿಂದ ಹದಿನೈದು ಪದಗಳಲ್ಲಿ ಉತ್ತರಿಸಿ : 3 × 2 = 6

8) ಅಗ್ನಿಯು ಖಾಂಡವವನವನ್ನು ದಾನರೂಪದಲ್ಲಿ ಪಡೆಯಬಯಸಿದ್ದು ಏಕೆ ?

9) ತಪಸ್ಸುಗಳ ಬಗೆಗೆ ಅರ್ಜುನನ ವ್ಯಾಖ್ಯಾನವೇನು ?

10) ಮುಕ್ತಿ ಪಡೆಯುವ ಮಾರ್ಗ ಯಾವುದು ?

11) ದುರ್ಜನರ ಬಗೆಗೆ ಸರ್ವಜ್ಞನು ಏನು ಹೇಳುತ್ತಾನೆ ?

12) ಭರತೇಶನು ಅರಸಿಯರಿಂದ ಯಾವ ಯಾವ ಕಾಣಿಕೆಗಳನ್ನು ಪಡೆದನು ?

III. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : 2 × 3 = 6

13) ಸ್ತ್ರೀಯರು ನಂದನವನದಲ್ಲಿ ಮಾಡಿದ ಚೇಷ್ಟೆಗಳಾವುವು ?

14) ಸಾಮವೇದಿಗಳ ಪಾಂಡಿತ್ಯ ಮತ್ತು ಪ್ರಭಾವಗಳನ್ನು ಕವಿ ಹೇಗೆ ವರ್ಣಿಸಿದ್ದಾನೆ ?

[ Turn over

www.careerindia.com

CAREERINDIA



15) ಮನುಷ್ಯ ಶರೀರದ ಧರ್ಮವನ್ನು ಅರ್ಜುನ ಹೇಗೆ ಹೇಳಿದ್ದಾನೆ ?

16) ಅರ್ಜುನ ಮತ್ತು ಮಾತಲಿಯರ ಸಂವಾದದ ಆಶಯವನ್ನು ತಿಳಿಸಿ.

IV. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : 2 × 5 = 10

17) ಖಾಂಡವವನ ದಹನ ಪ್ರಸಂಗದಲ್ಲಿ ಅರ್ಜುನ-ಕೃಷ್ಣರ ನಡುವೆ ನಡೆದ ಸಂವಾದದ ಸೊಗಸನ್ನು ನಿರೂಪಿಸಿ.

18) ಸಾಮವೇದಿಗಳ ಲಘುತ್ವ ಅಳಿದು ಗುರುತ್ವ ಪ್ರಾಪ್ತವಾಗಿದ್ದು ಹೇಗೆ ?

19) ವೇಷದಾರಿ ಶಿವನು ಸಾಮವೇದಿಗಳಿಗೆ ತನ್ನ ನಿಜರೂಪವನ್ನು ಹೇಗೆ ತೋರಿದ ?

20) ಅರ್ಜುನನ ವ್ಯಕ್ತಿತ್ವವನ್ನು ಕವಿ ಹೇಗೆ ಚಿತ್ರಿಸಿದ್ದಾನೆ ?

V. ಕೆಳಗಿನ ಪದ್ಯಗಳಲ್ಲಿ **ಎರಡರ** ಸಂದರ್ಭ ಸೂಚಿಸಿ ಮಹತ್ವವನ್ನು ತಿಳಿಸಿ : 2 × 3 = 6

21) ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ।
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ॥
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀ ಚನ್ನಸೋಮೇಶ್ವರಾ॥

22) ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು
ಮನದಲ್ಲಿ ನೆನೆಯದಿರುವವನು। ದೇಗುಲದ
ಕೊನೆಯಲಿದ್ದೇನು ಸರ್ವಜ್ಞ॥

23) ನೀರಸವೀ ಸಂಸಾರವೆಂದು ನೆನೆದು ಹೇಸಿ
ಬೆರಳ ಮಿಡಿವಳೋ ಯೆಂಬಂತೆ
ನರನಾಥನೆದೆಗೆ ಕಾಣಿಸಿತಾಕೆ ತಂತಿಯ
ಬೆರಳಿಂದ ಮಿಡಿದ ಬಿನ್ನಾಣ.

VI. ಕೆಳಗಿನ ಸಾಲುಗಳಲ್ಲಿ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : 2 × 2 = 4

24) ತಳಿರೊಳ್ ನೀನೆ ಬೆಡಂಗನೈ.

25) ಪಾಯಿಸಿದನಿಂದ್ರನೊಳಾದಿ ನರೇಂದ್ರರೆಲ್ಲರಂ.

26) ಗಗನದೊಳ್ಪಕ್ಕಿ ಹಣ್ಣೆಲೆಗಳೇಂ ಹಾರವೆ.

27) ನುಸಿಗಳಿವದಿರು ಮರ್ತ್ಯರು.

## ಭಾಗ – II

VII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : 2 × 5 = 10

28) ದೇವೇಂದ್ರ ಯಾರು ? ಅವನು ಪರೀಕ್ಷೆಯ ಆತಂಕದ ನಡುವೆಯೂ ಊರಿಗೆ ಬರಲು ಕಾರಣವೇನು ?

29) ದೇವೇಂದ್ರನು ಊರಿಗೆ ಬಂದಾಗ ಅವನ ತಾಯಿ ಹಾಗೂ ಇತರರ ಪ್ರತಿಕ್ರಿಯೆಗಳನ್ನು ಸಂಗ್ರಹಿಸಿ.

30) ದೇವೇಂದ್ರನ ತಾಯಿ ಗಟ್ಟಿಗಿತ್ತಿ. ಹೇಗೆ ? ವಿವರಿಸಿ.

www.careerindia.com

CAREERINDIA



VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧ ಬರೆಯಿರಿ : 1 × 10 = 10

31) ಗಿಲ್ ಯಾರು ? ದೇವೇಂದ್ರನಿಗೂ ಅವನಿಗೂ ಇದ್ದ ಸಂಬಂಧ ಎಂತಹುದು ? ಅವನು ದೇವೇಂದ್ರನಿಗೆ ನಿರೂಪಿಸಿದ ಕಥೆಯನ್ನು ತಿಳಿಸಿ.

32) ದೇವೇಂದ್ರ ಊರಿಗೆ ಹೊರಡುವ ಸಮಯದಲ್ಲಿ ದಾರಿಯಲ್ಲಿ ಎದುರಾದ ಮಳೆಯಿಂದ ಒದಗಿದ ಅನಾನುಕೂಲತೆಗಳನ್ನು ಪರಿಚಯಿಸಿ.

## ಭಾಗ – III

IX. ಕೆಳಗಿನ ಸಾಲುಗಳಲ್ಲಿ ಯಾವುದಾದರೂ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : 2 × 2 = 4

33) ಅವನ ನಾಲಗೆಯನ್ನೀಗಲೇ ಈ ನಿಮಿಷವೇ ತುಂಡಿಸಿ ಹದ್ದು ನಾಯ್ಗಳ್ಗೆ ಔತಣಕ್ಕಿಡುವುದಾಗಲಿ !

34) ತಿಪ್ಪೆಯಲ್ಲಿ ದೊರೆತ ರತ್ನವೂ ರತ್ನವಲ್ಲದೆ ಉಂಟೆ !

35) ನಾನೊಬ್ಬ ಗಂಡಸಾಗಿ ಹುಟ್ಟಬಾರದಾಗಿದ್ದಿತೆ; ಅಯ್ಯೊ ?

X. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : 2 × 3 = 6

36) ಮಹಾರಾಜ ಮಲ್ಲರಾಜನನ್ನು ಏನು ಕೇಳಿದನು ? ಅದಕ್ಕೆ ಆತನ ಪ್ರತಿಕ್ರಿಯೆ ಹೇಗೆ ವ್ಯಕ್ತವಾಯಿತು ?

37) ನಾಮಧೇಯದ ಬಗ್ಗೆ ಮಹಾರಾಜರ ಅಭಿಪ್ರಾಯವೇನು ?

38) ನಂಜಶೆಟ್ಟಿ ಮಾದೇವಮ್ಮಣ್ಣಿಯಲ್ಲಿ ಕ್ಷಮೆಯನ್ನು ಹೇಗೆ ಕೋರುತ್ತಾನೆ ?

XI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ : 1 × 10 = 10

39) ಮೈಸೂರು ಮಹಾರಾಜರ ಪಾತ್ರವನ್ನು ಚಿತ್ರಿಸಿ.

40) ಮಾದೇವಮ್ಮಣ್ಣಿಯ ವ್ಯಕ್ತಿತ್ವವನ್ನು ಸವಿವರವಾಗಿ ನಿರೂಪಿಸಿ.

## ಭಾಗ – IV

XII. ಕೆಳಗಿನ ಪದಗಳಲ್ಲಿ ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ : 2 × 2 = 4

41) ಶ್ವೇತ ಕೃಷ್ಣ ಕಾರಕ

42) ಅರಿಷಡ್ವರ್ಗಗಳು

43) ಊರ್ವಶಿ

XIII. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ನಾಲ್ಕರ** ಅರ್ಥ ತಿಳಿಸಿ : 4 × { EQ \f(1,2) }= 2

44) ಬೆಡಂಗ

45) ನೆನೆ

46) ಕುಕುಭ

47) ಖಗ

48) ಕಪಾಲ

49) ದಂಡಿಗೆ

[ Turn over

www.careerindia.com

CAREERINDIA



XIV. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ಮೂರು** ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ : 3 × 1 = 3

50) ವಸಂತ

51) ಬ್ರಹ್ಮ

52) ಭಕ್ತಿ

53) ಸ್ನೇಹ

54) ಭೂಮಿ

XV. ಕೆಳಗಿನ ನುಡಿಗಟ್ಟುಗಳಲ್ಲಿ ಯಾವುದಾದರೂ **ಎರಡನ್ನು** ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ : 2 × 1 = 2

55) ಆಚಂದ್ರಾರ್ಕ

56) ತಲೆಬಾಗು

57) ಮೈಮರೆ

58) ತಲೆಕೆಳಗಾಗು

## ಭಾಗ – V

XVI. ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : 2 × 5 = 10

59) ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ :

ವನದೇವತೆಗಳ್ ನಂದನ
ವನಮಂ ಪುಗುವಂತೆ ತಳಿರ ಕಳಿಕೆಯ ಪೊಸ ಪೂ
ವಿನ ಮೇಗೆ ದಿಟ್ಟಿಯಾಗಿರೆ
ವನಜಾನನೆಯರ್ ವಿಳಾಸವನಮಂ ಪೊಕ್ಕರ್.

60) ಈ ಕೆಳಗಿನ ಗದ್ಯಭಾಗವನ್ನು ಹೊಸಗನ್ನಡಕ್ಕೆ ಅನುವಾದಿಸಿ :

ಆ ವೃದ ಮಾಹೇಶ್ವರನಂ ಕುಮಾರನಲ್ಲಿಗೊಡಗೊಂಡು ಬರ್ಪಾಗಳು ತಾನೆಮ್ಮ ತೊತ್ತಿನ ಮಗಂ ತನ್ನ ಭವಮಂ ಮಱೆದನೆ ಎನ್ನ ಪರಿಯಲ್ಲ ವನೀಗಳೆ ತೋಱಿಕೊಟ್ಟಪೆಂ ತನ್ನೆರವಿನ ಸಿರಿಯಂ ನಂಬಿ ಎನ್ನಂ ಮಱೆದಡಾಂ ಬಿಡುವವನಲ್ಲೆಂದು ಕೆಲಬಲದವರ್ ಕೇಳ್ವಂತೆ ಗುಜುಗುಜುಗೊಳುತುಂ ಬಂದು ಕುಮಾರನ ಮುಂದೆ ನಿಂದಿರ್ದು.

61) ಕೆಳಗೆ ಸೂಚಿಸಿರುವ ಯಾವುದಾದರೂ **ಒಂದು** ವಸ್ತುವಿನ ಬಗೆಗೆ ಸ್ವಂತ ಕತೆ / ಕವಿತೆಯನ್ನು ರಚಿಸಿ :

ಅ) ಕನಸು

ಆ) ಪ್ರಕೃತಿ

www.careerindia.com